# ಮಕ್ಕಳ ಭವಿಷ್ಯಕ್ಕೆ ಇರಲಿ ಪ್ಲಾನ್ ಬಿ

ಸವಿತಾ ಮಾಧವ ಶಾಸ್ತ್ರಿ

'ಪ್ರೀತಂ ಚಿಕ್ಕವನಿದ್ದಾಗಿನಿಂದಲೂ ವೈದ್ಯನಾಗಬೇಕೆಂದು ಕನಸು ಕಂಡಿದ್ದ. ಬಾಲ್ಯದಲ್ಲಿ ಅವನಪ್ಪ ಅವನಿಗೆ ಆಟವಾಡಲು ಡಾಕ್ಟರ್ ಕಿಟ್ ತಂದುಕೊಟ್ಟಿದ್ದರು. ಅದರಲ್ಲಿದ್ದ ಆಟಿಕೆಯ ಸ್ತೆಥಾಸ್ಕೋಪ್ ಹಾಕಿಕೊಂಡು ಅವನು ಗೊಂಬೆಗಳನ್ನು ಚೆಕಪ್ ಮಾಡುತ್ತಿದ್ದ. ಇಂಜೆಕ್ಷನ್ ಕೊಡುತ್ತಿದ್ದ. ಹೀಗೆ ಡಾಕ್ಟರ್ ಆಟ ಆಡುತ್ತಾ ಬೆಳೆದವನಿಗೆ ತಾನು ಮುಂದೆ ಡಾಕ್ಟರ್ ಆಗಬೇಕೆಂಬ ಆಸೆ ಮನಸ್ಸಿನಲ್ಲಿ ಚಿಗುರೊಡೆಯಿತು. ದಿನ ಹೋದಂತೆ ಆ ಕನಸು ಬಲಗೊಳ್ಳುತ್ತಾ ಹೋಯಿತು. ಅವನ ಮನೆಯವರು ಸ್ವಲ್ಪ ಅನುಕೂಲಸ್ಥರೇ ಆದ್ದರಿಂದ ಅವನ ಇಚ್ಛೆಯನ್ನು ವಿರೋಧಿಸಲಿಲ್ಲ. ಅವನಿಗೆ ಪ್ರೋತ್ಸಾಹ ಕೊಟ್ಟರು.

ಆದರೆ ಪ್ರೀತಂ ಪಿಯುಸಿ ಮುಗಿಸಿದ ನಂತರ ವೈದ್ಯಕೀಯ ಪ್ರವೇಶ ಪರೀಕ್ಷೆಗೆ ಸಾಕಷ್ಟು ತಯಾರಿ ಮಾಡಿಕೊಂಡರೂ ಪ್ರವೇಶ ಪರೀಕ್ಷೆ ಪಾಸ್ ಆಗಲಿಲ್ಲ. ವೈದ್ಯಕೀಯ ವಿದ್ಯಾಲಯದಲ್ಲಿ ಸೀಟು ಸಿಗಲಿಲ್ಲ. ಮನೆಯವರು ಎಷ್ಟೇ ಹೇಳಿದರೂ ಕೇಳದೆ ಅವನು ಮತ್ತೆ ಒಂದು ವರ್ಷ ನೀಟ್ ಕೋಚಿಂಗ್ ತೊಗೊಂಡು ಪುನಃ ಪರೀಕ್ಷೆ ಕಟ್ಟಿದ. ಆದರೆ ಈ ಬಾರಿಯೂ ಕಡಿಮೆ ರ‍್ಯಾಂಕಿಂಗ್ ಪಡೆದ. ಹೀಗೆ ಸತತ ಮೂರು ವರ್ಷ ಪ್ರಯತ್ನಿಸಿ ಹತಾಶನಾದ. ಬೇರೆ ಕೋರ್ಸ್ ಸೇರಿ ತನ್ನ ಭವಿಷ್ಯ ರೂಪಿಸಿಕೊಳ್ಳಬಹುದಿತ್ತು. ಆದರೆ ಅವನು ಅದಕ್ಕೊಪ್ಪಲಿಲ್ಲ. ತನ್ನ ಕನಸು ನುಚ್ಚುನೂರಾದದ್ದು ಸಹಿಸದ ಅವನು ಡಿಪ್ರೆಶನ್‌ಗೆ ಜಾರಿದ.

ಹೀಗೆ ಪ್ರತಿ ವರ್ಷವೂ ವೈದ್ಯಕೀಯ ಶಿಕ್ಷಣ, ವಿದೇಶ ವ್ಯಾಸಂಗ, ಐಎಎಸ್ ಮುಂತಾದ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಬಯಸುವ ಸಾವಿರಾರು ವಿದ್ಯಾರ್ಥಿಗಳು ಅದಕ್ಕಾಗಿ ಹಗಲಿರುಳು ಶ್ರಮಪಡುತ್ತಾರೆ. ಆದರೆ ಕೆಲವೇ ಕೆಲವರು ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳುತ್ತಾರೆ. ತಾವು ಬಯಸಿದ ಕೋರ್ಸ್ ಸಿಗದ ಬಹಳಷ್ಟು ವಿದ್ಯಾರ್ಥಿಗಳು ಹತಾಶೆ ಅನುಭವಿಸಬೇಕಾಗುತ್ತದೆ.

ಆದರೆ ಹತಾಶೆಯನ್ನು ಅನುಭವಿಸುವ ಬದಲು, ಒಂದು ದಾರಿ ಮುಚ್ಚಿದರೆ ಇನ್ನೊಂದು ದಾರಿ ಇದ್ದೇ ಇರುತ್ತದೆ ಎಂಬ ಭರವಸೆಯನ್ನು ನಾವು ಬಾಲ್ಯದಿಂದಲೇ ಮಕ್ಕಳಲ್ಲಿ ಬೆಳೆಸಬೇಕು. ಅದೇ ಪ್ಲಾನ್ ಬಿ.

ಮಗುವೊಂದು ತಾನು ಮುಂದೆ ಪೈಲಟ್ ಆಗಬೇಕೆಂದು ಕನಸು ಕಂಡಿದ್ದರೆ ಅವನಿಗೆ ಸುಮ್ಮನೆ ಒಂದು ಪ್ರಶ್ನೆ ಕೇಳಬೇಕು. 'ಒಂದು ವೇಳೆ ನೀನು ಪೈಲಟ್ ಆಗಲಿಕ್ಕೆ ಸಾಧ್ಯವಾಗದಿದ್ದರೆ ಏನು ಮಾಡ್ತೀಯಾ?' ಅಂತ. ಆಗ ಆ ಮಗು ಒಂದು ಕ್ಷಣ ತನ್ನೆದುರಿರುವ ಇತರ ಆಯ್ಕೆಗಳ ಬಗ್ಗೆ ಯೋಚಿಸುತ್ತದೆ.

ಅಬ್ದುಲ್ ಕಲಾಮರ ಉದಾಹರಣೆ ತೆಗೆದುಕೊಳ್ಳಿ. ಅವರು ಬಾಲ್ಯದಿಂದಲೂ ಪೈಲಟ್ ಆಗಬೇಕೆಂದು ಕನಸು ಕಂಡಿದ್ದರು. ಪೈಲಟ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು. ಅವರ ಕನಸು ನುಚ್ಚುನೂರಾದರೂ ಅವರು ಕ್ಷಿಪಣಿ ಅಭಿವೃದ್ಧಿ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿ 'ಕ್ಷಿಪಣಿ ಮನುಷ್ಯ' ಎಂದೇ ಖ್ಯಾತರಾದರು. ಭಾರತದ ರಾಷ್ಟ್ರಪತಿ ಆದರು.

ಹೀಗೆ ಜೀವನದಲ್ಲಿ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ಬಾಗಿಲು ತೆರೆದಿರುತ್ತದೆ ಎಂಬ ವಿಷಯವನ್ನು ಸಾಧಕರ ಉದಾಹರಣೆ ಸಹಿತ ನಾವು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು.

- ಮಗುವೊಂದು ತಾನು ವೈದ್ಯನೇ ಆಗಬೇಕೆಂದು ಕನಸು ಕಂಡಾಗ ವೈದ್ಯಕೀಯ ಕ್ಷೇತ್ರದಲ್ಲೇ ಇರುವ ಇತರ ಆಯ್ಕೆಗಳ ಬಗ್ಗೆ ಮಕ್ಕಳಿಗೆ ಮಾಹಿತಿ ಒದಗಿಸಬೇಕು.
- ಇನ್ನು ಕೆಲವರು ಸಂಗೀತ, ನೃತ್ಯ, ನಟನೆ, ಕ್ರಿಕೆಟ್ ಹೀಗೆ ತಮ್ಮಲ್ಲಿರುವ ಪ್ರತಿಭೆಯನ್ನೇ ವೃತ್ತಿಯಾಗಿ ಮಾಡಿಕೊಳ್ಳಬೇಕೆಂಬ ಕನಸು ಕಂಡಿರುತ್ತಾರೆ. ಆದರೆ ಇದು ಎಲ್ಲರ ವಿಷಯದಲ್ಲೂ ನನಸಾಗುವ ಸಾಧ್ಯತೆ ಕಡಿಮೆ. ಏಕೆಂದರೆ ಎಲ್ಲರಿಗೂ ತಮ್ಮ ಪ್ರತಿಭೆಯ ಮೂಲಕ ಜೀವನ ನಿರ್ವಹಣೆಗೆ ಅಗತ್ಯವಿರುವಷ್ಟು ಹಣ ಗಳಿಸಲು ಸಾಧ್ಯವಿಲ್ಲ. ಹೀಗಿರುವಾಗ ಇಂತಹ ಒಂದು ಪ್ರತಿಭೆಯನ್ನು ಹವ್ಯಾಸಕ್ಕೆ ಸೀಮಿತವಾಗಿಟ್ಟುಕೊಂಡು ಬದುಕಿಗೆ ಬೇರೊಂದು ಮಾರ್ಗ ಹಿಡಿಯಬೇಕೆಂದು ಬಾಲ್ಯದಲ್ಲೇ ಮನವರಿಕೆ ಮಾಡಿಕೊಡಬೇಕು.
- ಈಗ ಸಾಕಷ್ಟು ಹೊಸ ಹೊಸ ಕೋರ್ಸ್‌ಗಳ ಬಗ್ಗೆ ಜಾಲತಾಣದಲ್ಲಿ ಮಾಹಿತಿ ಸಿಗುತ್ತದೆ. ಅಲ್ಲದೆ ಆಯಾ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವವರಿಂದ ಮಾಹಿತಿ ಕಲೆಹಾಕಿ ಆ ವೃತ್ತಿಯ ಸಾಧಕ ಬಾಧಕಗಳ ಬಗ್ಗೆ, ಅವಕಾಶಗಳ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ನೀಡಬಹುದು.
- ಮಕ್ಕಳ ಆಸಕ್ತಿಯ ಕ್ಷೇತ್ರ ಯಾವುದೆಂದು ಪೋಷಕರು ಮನಗಾಣಬೇಕು. ಒತ್ತಾಯದಿಂದ ಮಕ್ಕಳನ್ನು ಕೋರ್ಸ್‌ಗೆ ಸೇರಿಸಿದರೆ ಅವರು ಅದನ್ನು ಅರ್ಧಕ್ಕೇ ಬಿಡಬಹುದು ಅಥವಾ ಮುಂದೆ ಆ ವೃತ್ತಿಯಲ್ಲಿ ನಿರಾಸಕ್ತಿ ತೋರಬಹುದು.
- ಬಾಲ್ಯದಿಂದಲೂ ನಾವು ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸಿ ಅವರಲ್ಲಿರುವ ಪ್ರತಿಭೆ ಮತ್ತು ದೌರ್ಬಲ್ಯ ಎರಡನ್ನೂ ಅರಿತುಕೊಂಡಿರಬೇಕು. ಅವರಲ್ಲಿರುವ ವಾಕ್ಚಾತುರ್ಯ, ಸಮಸ್ಯೆಗಳು ಬಂದಾಗ ಅವರು ಅದನ್ನು ಎದುರಿಸುವ ರೀತಿ, ಅವರು ಯಾವ ವಿಷಯದಲ್ಲಿ ಮುಂದಿದ್ದಾರೆ, ಅವರ ಆಸಕ್ತಿಯ ವಿಷಯ ಯಾವುದು? ಜನರೊಡನೆ ಅವರು ಹೇಗೆ ಬೆರೆಯುತ್ತಾರೆ? ಈ ಎಲ್ಲ ಅಂಶಗಳನ್ನು ಗಮನಿಸಿ ಅವರಿಗೆ ಸರಿಹೊಂದುವಂತಹ, ಅವರ ಇಚ್ಛೆಯ ಕೋರ್ಸಿಗೆ ಸೇರಿಸಿ ಅದಕ್ಕೆ ಸಂಬಂಧಿಸಿದ ವೃತ್ತಿಯಲ್ಲಿ ಮುಂದುವರಿಯಲು ಅವಕಾಶ ಕೊಟ್ಟರೆ ಮಕ್ಕಳಿಗೂ ತೃಪ್ತಿ, ಹೆತ್ತವರಿಗೂ ನೆಮ್ಮದಿ. ■

